# ಫಿಟ್ ಆ್ಯಂಡ್ ಬೋಲ್ಡ್ ಅಕ್ಷಯ್

ಮುಂದಿನ ಸೆಪ್ಟೆಂಬರ್ 9ಕ್ಕೆ ಅಕ್ಷಯ್ ಕುಮಾರ್‌ಗೆ 53 ತುಂಬುತ್ತದೆ. ಇವತ್ತಿಗೂ ಬಾಲಿವುಡ್‌ನಲ್ಲಿ ತುಂಬು ಜವ್ವನಿಗನಂತೆ ಚಟುವಟಿಕೆಯಿಂದ ಓಡಾಡಿಕೊಂಡಿರುವ ಅಕ್ಷಯ್‌ಗೆ ಇಷ್ಟು ವಯಸ್ಸಾಗಿದೆ ಎಂದರೆ ನಂಬುವವರು ಕಡಿಮೆಯೇ. ಇನ್ನೂ 40ರಂತೆ ಕಾಣುವ ಅಕ್ಷಯ್, ಇದೀಗ ಕೊರೊನಾ ಭಯದ ಮಧ್ಯೆಯೇ ಹೊಸ ಚಿತ್ರದ ಶೂಟಿಂಗ್ ನಡೆಸಲೆಂದು ಸ್ಕಾಟ್ಲೆಂಡ್‌ಗೆ ಹೊರಟುನಿಂತಿದ್ದಾರೆ ಪ್ರೈವೇಟ್ ಜೆಟ್‌ನಲ್ಲಿ. 'ಬೆಲ್‌ಬಾಟಂ' ಚಿತ್ರದ ಶೂಟಿಂಗ್ ಅದು.

ಮನೆಯಲ್ಲೇ ಎಲ್ಲ ಮುನ್ನೆಚ್ಚರಿಕೆ ವಹಿಸಿ ಕುಳಿತಿದ್ದ ಅಮಿತಾಭ್ ಬಚ್ಚನ್ ಮತ್ತು ಕುಟುಂಬದ ಹಲವು ಸದಸ್ಯರು 'ಕೋವಿಡ್ 19' ಸೋಂಕಿಗೆ ಒಳಗಾಗಿದ್ದು ನೋಡಿ ಬಾಲಿವುಡ್ ಬೆಚ್ಚಿಬಿದ್ದಿದೆ. ಆದರೆ ಅಕ್ಷಯ್ ಮಾತ್ರ ಯಾವ ಭಯವನ್ನೂ ತೋರಿಸದೆ, ನಿರ್ಮಾಪಕರ ದುಡ್ಡಿಗೆ ನ್ಯಾಯ ಸಲ್ಲಿಸಲು ಹೊರಟುನಿಂತಿದ್ದಾರೆ. ಇದನ್ನು ಭಂಡ ಧೈರ್ಯ ಎಂದೂ ಕರೆಯಬಹುದು; ಬುದ್ಧಿವಂತಿಕೆಯ ತೀರ್ಮಾನ ಎನ್ನಲೂಬಹುದು; ನಿರ್ಮಾಪಕರ ನಷ್ಟದ ಕುರಿತ ಕಾಳಜಿ ಎಂದೂ ಪರಿಗಣಿಸಬಹುದು.



ಭಂಡ ಧೈರ್ಯ ಎನ್ನುವುದು ಅಕ್ಷಯ್‌ಗೆ ಮೊದಲಿನಿಂದಲೂ ದೈವದತ್ತವಾಗಿ ಬಂದಿರುವ ವರ. ಅದು ಬಾಲ್ಯದಿಂದಲೂ ಜೊತೆಗಿತ್ತು. ಅವರ ಬಾಲ್ಯದ ಹೆಸರು ರಾಜೀವ್ ಭಾಟಿಯಾ. ಅಮೃತಸರದಲ್ಲಿ ಹುಟ್ಟಿ ಮುಂಬೈಯಲ್ಲಿ ಶಾಲೆಗೆ ಹೋದದ್ದು. ಡಾನ್‌ಬಾಸ್ಕೊ ಸ್ಕೂಲ್ ಆದ ಬಳಿಕ ಗುರುನಾನಕ್ ಖಾಲ್ಸಾ ಕಾಲೇಜ್‌ಗೆ ಸೇರ್ಪಡೆ. ಅಲ್ಲಿ ಮೊದಲ ವರ್ಷದಲ್ಲೇ ಶಿಕ್ಷಣ ಕೈಬಿಟ್ಟು ಹಾಂಕಾಂಗ್‌ಗೆ ಪಯಣ. ಮಾರ್ಷಲ್ ಆರ್ಟ್ಸ್ ಕಲಿಯುವ ಹೆಬ್ಬಯಕೆ. ಹಾಂಕಾಂಗ್‌ನಲ್ಲಿ ಕುಂಗ್‌ಫೂ, ಟೇಕ್ವಾಂಡೊ ಮುಂತಾಗಿ ಸಮರಕಲೆ ಕಲಿಯುತ್ತಿದ್ದಂತೆಯೇ ಹೊಟ್ಟೆಪಾಡಿಗಾಗಿ ಹೋಟೆಲ್‌ನಲ್ಲಿ ಶೆಫ್, ವೈಟರ್ ಆಗಿ ದುಡಿಮೆ!

ಮುಂಬೈಗೆ ಮರಳಿದ ನಂತರ ಅಕ್ಷಯ್ ಕನಸು ಇದ್ದದ್ದು ಮಾರ್ಷಲ್ ಆರ್ಟ್ಸ್ ಸ್ಕೂಲ್ ತೆರೆಯುವುದು. ಅದರಂತೆಯೇ ಸ್ಕೂಲ್ ಆರಂಭವಾಯಿತು. ಈತನ ಹೈಟ್ ಮತ್ತು ಸ್ಟೈಲ್ ನೋಡಿದವರು ಯಾರೋ ಮಾಡೆಲಿಂಗ್ ಕ್ಷೇತ್ರಕ್ಕೆ ಕರೆದರು. ನಿರ್ಮಾಪಕರೊಬ್ಬರು ಚಿತ್ರದ ಹೀರೊ ಮಾಡಿದರು. ಆದರೆ ಶೂಟಿಂಗ್ ಕುಂಟುತ್ತಾ ನಡೆದಿತ್ತು. ಅದೇ ವೇಳೆ ಇನ್ನೆರಡು ಚಿತ್ರಗಳಲ್ಲಿ ನಟಿಸಿ ಅವು ಬಿಡುಗಡೆಯಾದವು. ಕೊನೆಗೆ ಮೊದಲ ಮೂರೂ ಚಿತ್ರಗಳು ಫ್ಲಾಪ್ ಎನ್ನುವುದು ಖಚಿತವಾಯಿತು.

ಅದೃಷ್ಟ ಚೆನ್ನಾಗಿದ್ದರೆ ಯಾರೂ ತಡೆಯಲಾಗುವುದಿಲ್ಲ. ಅಬ್ಬಾಸ್ ಮಸ್ತಾನ್ ನಿರ್ದೇಶನದ 'ಕಿಲಾಡಿ' ಚಿತ್ರ ಸೂಪರ್‌ಹಿಟ್ ಆಯಿತು. ಅಕ್ಷಯ್ ಹೆಸರಿನ ಜೊತೆಗೆ ಕಿಲಾಡಿ ಎನ್ನುವ ವಿಶೇಷಣವೂ ಅಂಟಿಕೊಂಡಿತು. 'ಕಿಲಾಡಿ' ಎನ್ನುವ ಹೆಸರು ಅಂಟಿಕೊಂಡ ಒಟ್ಟು 7 ಚಿತ್ರಗಳಲ್ಲಿ ಅಕ್ಷಯ್ ಅಭಿನಯಿಸಿದ್ದಾರೆ. ಆದರೆ ಎರಡು ಚಿತ್ರಗಳು ಹಿಟ್ ಆದ ಬಳಿಕ ಮತ್ತೆ ಐದಾರು ಚಿತ್ರಗಳು ಫ್ಲಾಪ್ ಆದವು. ಎರಡನೇ ಸರದಿಯಲ್ಲಿ 'ಮೈ ಕಿಲಾಡಿ ತೂ ಅನಾಡಿ' ಮತ್ತು 'ಮೊಹ್ರಾ' ಚಿತ್ರಗಳು ಸೂಪರ್‌ಹಿಟ್ ಆದವು. ಹೀಗೆ ತೇಲುತ್ತಾ, ಮುಳುಗುತ್ತಾ ಚಿತ್ರಬದುಕು ಸಾಗಿತು.

ಇದೆಲ್ಲ ಆರಂಭದ ಕಥೆ. ಈಗ ಅಕ್ಷಯ್ ಬಾಲಿವುಡ್ ಅತ್ಯಂತ ಬ್ಯುಸಿ ತಾರೆ. ವರ್ಷವೊಂದರಲ್ಲಿ 67 ಚಿತ್ರಗಳು ಕೈಯಲ್ಲಿರುವುದು ನಡೆದೇ ಇದೆ. ಪ್ರಿಯದರ್ಶನ್ ನಿರ್ದೇಶನದ 'ಹೇರಾಫೇರಿ' ಚಿತ್ರದಲ್ಲಿ ನಟಿಸಿದ ಬಳಿಕ ಅಕ್ಷಯ್ ನಟಿಸಿದ ಕಾಮಿಡಿ ಚಿತ್ರಗಳು ಸಾಲು ಸಾಲಾಗಿ ಬಂದವು. ಈಗಲೂ ಬರುತ್ತಿವೆ. ಆದರೆ ಅದರ ಜೊತೆಗೇ ಅವರು ನಟಿಸಿದ ಥ್ರಿಲ್ಲರ್ ಸಿನಿಮಾಗಳೂ ಹಿಟ್ ಆಗುತ್ತಿರುವುದು ಅಕ್ಷಯ್ ವಿಶೇಷ. 'ನಮಸ್ತೆ ಲಂಡನ್', 'ಭೂಲ್ ಭುಲೈಯ', 'ಯೆಹ್ ದಿಲ್ಲಗಿ', 'ಏರ್‌ಲಿಫ್ಟ್', 'ಬೇಬಿ', 'ಸಿಂಗ್ ಈಸ್ ಕಿಂಗ್', 'ಆ್ಯಕ್ಷನ್ ರೀಪ್ಲೆ', 'ತೀಸ್ ಮಾರ್ ಖಾನ್' ಮುಂತಾದ ಚಿತ್ರಗಳು ಅತ್ಯಧಿಕ ಖ್ಯಾತಿ ತಂದುಕೊಟ್ಟವು. ಕೊನೆಯ ಮೂರು ಸೂಪರ್‌ಹಿಟ್ ಚಿತ್ರಗಳಿಗೆ ಅಕ್ಷಯ್ ಸಹನಿರ್ಮಾಪಕನೂ ಹೌದು.

ವಿವಾದಗಳೂ ಅಕ್ಷಯ್‌ಗೆ ಹೊಸತೇನಲ್ಲ. ಆರಂಭದ ವಿವಾದಗಳೆಲ್ಲ ಹೀರೊಯಿನ್‌ಗಳ ಜೊತೆಗಿನ ಇಶ್ಕ್‌ಗೆ ಸಂಬಂಧಿಸಿದ್ದು. ಪೂಜಾ ಬೇಡಿ ಜೊತೆಗೆ ಲಿವಿಂಗ್ ರಿಲೇಷನ್ ಹಲವು ವರ್ಷಗಳ ಕಾಲ ಇತ್ತು. ಕಾಲಕಾಲಕ್ಕೆ ಆಯೆಷಾ ಜುಲ್ಕಾ, ರವೀನಾ ಟಂಡನ್ ಜೊತೆಗೆ ಪ್ಯಾರ್ ವ್ಯಾರ್ ನಡೆದ ಸುದ್ದಿಯೂ ಬಂತು. ರವೀನಾ ಟಂಡನ್ ಅಂತೂ ಪತ್ರಕರ್ತರ ಎದುರೇ ಅಕ್ಷಯ್‌ನ ಗರ್ಲ್‌ಫ್ರೆಂಡ್‌ಗಳ ಬಗ್ಗೆ ಕಿಡಿಕಾರಿದ್ದೂ ನಡೆಯಿತು. ಟ್ವಿಂಕಲ್ ಖನ್ನಾ ಜೊತೆಗಿನ ಮದುವೆಯ ಬಳಿಕ ಈ ರೀತಿಯ ಸುದ್ದಿಗಳಿಗೆ ತೆರೆ ಬಿತ್ತು.

ಅದೇನೇ ಇದ್ದರೂ ಬರಿಗೈಲಿ ಬಾಲಿವುಡ್‌ಗೆ ಬರುವ ಹೀರೊಗಳಿಗೆ ಅಕ್ಷಯ್ ಇವತ್ತಿಗೂ ಸ್ಫೂರ್ತಿಯ ಸೆಲೆ. ಪ್ರತಿಭೆ ಮತ್ತು ಕಠಿಣ ಪರಿಶ್ರಮದ ಮೂಲಕ ಇವತ್ತು ಇಷ್ಟೊಂದು ಎತ್ತರಕ್ಕೆ ಏರಿರುವುದು ಗಮನಾರ್ಹವೇ. ಅಧಿಕಾರಸ್ಥರ ಜೊತೆಗೆ ಸುಮಧುರ ಸಂಬಂಧ ಇಟ್ಟುಕೊಳ್ಳುವುದು ಈ ಕಿಲಾಡಿಯ ಇನ್ನೊಂದು ತಾಖತ್ತು. 2004ರಲ್ಲಿ ರಾಜೀವ್ ಗಾಂಧಿ ಪ್ರಶಸ್ತಿ, 2009ರಲ್ಲಿ ಪದ್ಮಶ್ರೀ, ಆ ಬಳಿಕ ಪ್ರಧಾನಿ ಮೋದಿಯವರ ವಿಶೇಷ ಸಂದರ್ಶನ ಹೀಗೆ ಅಕ್ಷಯ್ ಸಾಧನೆಗಳೂ ಹಲವಾರು. ಟೀವಿಯಲ್ಲಿ 'ಖತ್ರೋಂ ಕೆ ಕಿಲಾಡಿ' ಮತ್ತು 'ಡೇರ್ ಟು ಡಾನ್ಸ್' ಎಂಬ ಎರಡು ಕಾರ್ಯಕ್ರಮಗಳ ಆ್ಯಂಕರ್ ಆಗಿಯೂ ಅಕ್ಷಯ್ ಜನಪ್ರಿಯ.

ಅಕ್ಷಯ್ ಫಿಟ್‌ನೆಸ್‌ಗೆ ನೀಡುವ ಮಹತ್ವ ಮುಖ್ಯವಾದದ್ದು. ಈಗಲೂ ಬೆಳಿಗ್ಗೆ ಸೂರ್ಯೋದಯಕ್ಕೆ ಮುನ್ನ ಏಳುವುದು, ಕಿಕ್‌ಬಾಕ್ಸಿಂಗ್, ಬಾಸ್ಕೆಟ್‌ಬಾಲ್ ಆಡುವುದು, ಮಾರ್ಷಲ್ ಆರ್ಟ್ಸ್ ಇವೆಲ್ಲವೂ ಈತನ ಸುಂದರಕಾಯದ ಗುಟ್ಟು.

(ಜುಲೈ 23ರ ಸಂಚಿಕೆಯ ಸೆಲೆಬ್ರಿಟಿ ಬರಹದಲ್ಲಿ ಫೆಡರರ್ ಬದಲಿಗೆ ಜೊಕೊವಿಕ್ ಫೋಟೊ ಪ್ರಕಟಗೊಂಡಿದೆ. ಪ್ರಮಾದಕ್ಕಾಗಿ ವಿಷಾದಿಸುತ್ತೇವೆ. –ಸಂ)

■ ಹನಿ

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65